RNU AIR DHARWAD

NOVEMBER 11, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಯುವಶಕ್ತಿಯ ಸೃಜನಶೀಲತೆಗೆ ಪೂರಕವಾದ, ಮಹತ್ವದ ಯೋಜನೆಗಳು ಕೇಂದ್ರದಿಂದ ಜಾರಿಗೆ – ಪ್ರಲ್ಹಾದ ಜೋಶಿ.
- ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ, 11 ಸಾವಿರದ 290 ವೈವಿಧ್ಯಮಯ ಭತ್ತದ ತಳಿಗಳ ಸಂರಕ್ಷಣೆ, ಶ್ಲಾಘನೀಯ – ಎನ್.ಚಲುವರಾಯಸ್ವಾಮಿ.
- ಜಾನಪದವೇ ಎಲ್ಲ ಕಲೆಗಳಿಗೆ ಉಸಿರು ಮತ್ತು ಆಸರೆ – ಪದ್ಮಶ್ರೀ ಬಿ.ಮಂಜಮ್ಮ ಜೋಗತಿ.
- ಇಂದು, ರಾಜ್ಯಾದ್ಯಂತ ವೀರ ವನಿತೆ ಒನಕೆ ಓಬವ್ವನವರ ಜಯಂತ್ಯುತ್ಸವ; ಶ್ರದ್ಧಾ ಭಕ್ತಿಯಿಂದ ಆಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಇಂದು ರಾಷ್ಟ್ರೀಯ ಶಿಕ್ಷಣ ದಿನಾಚರಣೆ. ಕ್ರಾಂತಿಕಾರಿ ಚಿಂತಕ ಮತ್ತು ಶಿಕ್ಷಣ ತಜ್ಞ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ, ಜನ್ಮ ದಿನ. ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ, ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಸ್ಫೂರ್ತಿದಾಯಕವಾಗಿದೆ. ಸಮಾಜದಲ್ಲಿ ಭ್ರಾತೃತ್ವವನ್ನು ಬೆಳೆಸಲು ಅವರು ಮಹತ್ವದ ಕೆಲಸ ಮಾಡಿದ್ದನ್ನು, ಯುವ ಪೀಳಿಗೆಗೆ ಪರಿಚಯಿಸಲು ಈ ದಿನ ಮೀಸಲಿದೆ.

<><><>

ಯುವಶಕ್ತಿಯ ಕೌಶಲ ಮತ್ತು ಸೃಜನಶೀಲತೆಗೆ ಪೂರಕವಾದ, ಮಹತ್ವದ ಹಲವು ಯೋಜನೆಗಳನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೂಪಿಸಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಧಾರವಾಡದ ನವನಗರದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – "ಟ್ರಿಪಲ್ ಐ.ಟಿ.ಧಾರವಾಡ ಕಾಂಕ್ಲೇವ್’

ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಹೊಸ ಆವಿಷ್ಕಾರಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕರ್ತವ್ಯವನ್ನು, ಧಾರವಾಡದ ಟ್ರಿಪಲ್ ಐ.ಟಿ. ಸಮರ್ಥವಾಗಿ ನಿಭಾಯಿಸುತ್ತಿದೆ ಎಂದು, ಸಚಿವರು ಶ್ಲಾಘಿಸಿದರು. ವಿಶ್ವದಲ್ಲೇ ಭಾರತದಂತಹ ಅಪಾರ ಸಂಖ್ಯೆಯ ಯುವಶಕ್ತಿಯನ್ನು ಹೊಂದಿರುವ ದೇಶ ಮತ್ತಾವುದೂ ಇಲ್ಲ. ಭಾರತದ ಯುವಜನತೆ ಹೊಸ ಹೊಸ ಆವಿಷ್ಕಾರಗಳನ್ನು ಕೈಗೊಳ್ಳುವ ಮೂಲಕ, ಪ್ರಪಂಚಕ್ಕೆ ಮಾದರಿಯಾಗಬೇಕು. ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಚಿವ ಪ್ರಲ್ಹಾದ ಜೋಶಿ ನುಡಿದರು. ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ವಿಧಾನ ಪರಿಷತ್ ಶಾಸಕ ಎಸ್.ವಿ. ಸಂಕನೂರ ಹಾಗೂ ಟ್ರಿಪಲ್ ಐ.ಟಿ. ನಿರ್ದೇಶಕ ಮಹದೇವ ಪ್ರಸನ್ನ ಪಾಲ್ಗೊಂಡಿದ್ದರು.

<><><>

ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳು, ದೇಶವಾಸಿಗಳ ಸರ್ವತೋಮುಖ ಅಭಿವೃದ್ಧಿಗೆ ರೂಪಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ವಿಕಸಿತ ಭಾರತದ ನಿರ್ಮಾಣಕ್ಕೆ ಸಾಕ್ಷಿಯಾಗಿದೆ ಎಂದು, ಕೇಂದ್ರ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಶಿಗ್ಗಾಂವಿ ಸವಣೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆ, ತಡಸ ಗ್ರಾಮದಲ್ಲಿ, ಎನ್.ಡಿ.ಎ. ಮೈತ್ರಿ ಅಭ್ಯರ್ಥಿ, ಭರತ ಬೊಮ್ಮಾಯಿ ಪರ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರ, ರೈತರಿಗೆ ನೀಡುವ ಸಹಾಯ ಧನವನ್ನು ಹೆಚ್ಚಿಸಿ, ರೈತರ ಹರ್ಷಕ್ಕೆ ಕಾರಣಿಭೂತವಾಗಿತ್ತು. ಭರತ ಬೊಮ್ಮಾಯಿ ಸಹ, ಈ ಶಿಗ್ಗಾಂವ ಕ್ಷೇತ್ರವನ್ನು, ಮಾದರಿಯಾಗಿಸಲಿದ್ದಾರೆ ಎಂದರು.

<><><>

ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಪಕ್ಷದ ಅಭ್ಯರ್ಥಿ ಪರ, ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಹಾವೇರಿ ಜಿಲ್ಲೆ ಶಿಗ್ಗಾಂವದಲ್ಲಿ ಬಿಜೆಪಿ ಕೇಂದ್ರ ಸಂಸದೀಚು ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಪ್ರಚಾರ ಕೈಗೊಂಡರು.

<><><>

ಇಂದು ಸಂಜೆ 5.30ಕ್ಕೆ, ರಾಜ್ಯದ ಮೂರೂ ವಿಧಾನಸಭಾ ಕ್ಷೇತ್ರಗಳ ಉಪ ಚುನಾಣೆಯ ಬಹಿರಂಗ ಪ್ರಚಾರ ಅಂತ್ಯವಾಗಲಿದೆ.

<><><>

ಹಾವೇರಿ ಜಿಲ್ಲೆ, ಶಿಗ್ಗಾಂವ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ, 85 ವರ್ಷ ಮೇಲ್ಪಟ್ಟ ಹಿರಿಯ ಮತದಾರರು ಹಾಗೂ ವಿಶೇಷಚೇತನರಾದ 294 ಮತದಾರರು, ಮನೆಯಿಂದಲೇ ಮತ ಚಲಾಯಿಸಲಿದ್ದಾರೆ ಎಂದು, ಜಿಲ್ಲಾ ಚುನಾವಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

<><><>

ಮಂಡ್ಯದ, ಶ್ರೀ ವಿಶ್ವೇಶ್ವರಾಯ ಕಾಲುವೆ ತೋಟ, 'ವಿ.ಸಿ. ಫಾರ್ಮ್'ನಲ್ಲಿ, 11 ಸಾವಿರದ 290 ವೈವಿಧ್ಯಮಯ ಭತ್ತದ ತಳಿಗಳನ್ನು, ಒಂದೇ ಜಾಗದಲ್ಲಿ ಬಿತ್ತನೆ ಮಾಡಿ, ಏಕಕಾಲದಲ್ಲಿ ಬೆಳೆಸುವ

ಮೂಲಕ, ಮಹತ್ವದ ಸಂಶೋಧನೆಗೆ ಮುಂದಾಗಿರುವ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಕಾರ್ಯ, ಶ್ಲಾಘನೀಯ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ಹೇಳಿದ್ದಾರೆ. ಸ್ಥಳೀಯ ಅಪರೂಪದ ಭತ್ತದ ತಳಿಗಳ ಸಂರಕ್ಷಣೆಯ ಜೊತೆ, ದೇಶದ ಜನತೆಗೆ ಆಹಾರ ಭದ್ರತೆಯನ್ನು ಖಾತ್ರಿ ಪಡಿಸುವಲ್ಲಿ, ಇಂತಹ ಸಂಶೋಧನೆಗಳು ಮಹತ್ತರ ಪಾತ್ರವಹಿಸಲಿವೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, ಅವರು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

<><><>

ಜಾನಪದವೇ, ಎಲ್ಲ ಕಲೆಗಳಿಗೆ ಉಸಿರು ಮತ್ತು ಆಸರೆ; ಉತ್ತರ ಕರ್ನಾಟಕ ಶರಣರು, ಸಂತರು ನೆಲೆಸಿ, ಶ್ರೀಮಂತಗೊಳಿಸಿದ ಪುಣ್ಯಭೂಮಿ ಎಂದು, ಜಾನಪದ ಅಕಾದೆಮಿ ನಿಕಟಪೂರ್ವ ಅಧ್ಯಕ್ಷರಾದ, ಪದ್ಮಶ್ರೀ ಬಿ.ಮಂಜಮ್ಮ ಜೋಗತಿ ಹೇಳಿದ್ದಾರೆ. ರಾಯಚೂರಿನ ಮುರಿಗೆಪ್ಪ ಖೇಣೇದ್ ಕಾಲೇಜು ಆವರಣದಲ್ಲಿ, 2ನೇ ಜಾನಪದ ಸಮ್ಮೇಳನವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಎಚ್.ಎಲ್. ನಾಗೇಗೌಡರು ಮತ್ತು ಜಾನಪದ ಜಗತ್ತನ್ನು ವಿಶೇಷವಾಗಿ ಸ್ಮರಿಸಿದ ಅವರು, ಜಾನಪದ ಎಂಬ ಮೌಖಿಕ ಸಂಪ್ರದಾಯದ ಕಲೆ ಯುವ ಪೀಳಿಗೆಗೆ ದಾಟಿಸುವ ಹೊಣೆ ಹಿರಿಯರದ್ದು ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ, ಗಜಾನನ ಕಲೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್ ಚೊಚ್ಚಲ, 'ಉತ್ತರಕನ್ನಡ ಜಿಲ್ಲೆ ಯಕ್ಷಶ್ರೀ ಪುರಸ್ಕಾರ'ವನ್ನು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಶತಾವಧಾನಿ ಡಾ.ರಾ.ಗಣೇಶ ಅವರಿಗೆ, ನಾಳೆ ಹೊನ್ನಾವರದಲ್ಲಿ ಪ್ರದಾನ ಮಾಡಲಾಗುತ್ತಿದೆ. ಯಕ್ಷಗಾನ ನೃತ್ಯ, ಭಾಗವತಿಕೆಯ ಬಗ್ಗೆ ಅಧ್ಯಯನ ನಡೆಸಿ, ಯಕ್ಷರಾತ್ರಿ ಕೃತಿಯನ್ನು ರಚಿಸಿ, ಏಕವ್ಯಕ್ತಿ ಮತ್ತು ಯುಗಳ ಯಕ್ಷಗಾನ ಪ್ರಕಾರವನ್ನು ಮುನ್ನೆಲೆಗೆ ತಂದಿರುವ, ಶತಾವಧಾನಿ ರಾ. ಗಣೇಶ ಅವರು, ಪ್ರದೇಶ ಸಮಾಚಾರಕ್ಕಾಗಿ, ಸಂತಸ ವ್ಯಕ್ತಪಡಿಸಿದ್ದಾರೆ.

<><><>

ಶತಾವಧಾನಿ ಡಾ.ಆರ್.ಗಣೇಶ ಧ್ವನಿ 50 ಸೆಕೆಂದುಗಳು

<><><>

ಇಂದು ರಾಜ್ಯಾದ್ಯಂತ ಒನಕೆ ಓಬವ್ವನವರ ಜಯಂತಿಯನ್ನು, ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಬೆಂಗಳೂರಿನ ಜೆ.ಸಿ. ರಸ್ತೆಯ, ಕನ್ನಡ ಭವನದ ನಯನ ರಂಗಮಂದಿರದಲ್ಲಿ, ಇಂದು ಮಧ್ಯಾಹ್ನ 12 ಗಂಟೆಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, 'ವೀರ ವನಿತೆ ಒನಕೆ ಓಬವ್ವ ಜಯಂತಿ'ಯ ಪ್ರಧಾನ ಕಾರ್ಯಕ್ರಮ ಆಯೋಜಿತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಓಬವ್ವನವರ ಸ್ಮೃತಿಗೆ ಶ್ರದ್ಧಾಂಜಲಿ ಸಲ್ಲಿಸಿ, ಜಯಂತ್ಯುತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಬೆಂಗಳೂರಿನ ಉರಿಲಿಂಗ ಪೆದ್ದಿ ಮಠದ, ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಸಾನ್ನಿಧ್ಯ ವಹಿಸಲಿದ್ದಾರೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ ಗರುಡಾಚಾರ, ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ, ಕೇಂದ್ರ ಸಚಿವರುಗಳಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಪಾಲ್ಗೊಳ್ಳಲಿದ್ದಾರೆ.

<><><>

ಧಾರವಾಡ ಸೇರಿದಂತೆ, ರಾಜ್ಯದ 31 ಜಿಲ್ಲಾಡಳಿತಗಳು 'ವೀರ ವನಿತೆ ಒನಕೆ ಓಬವ್ವನವರ ಜಯಂತ್ಯುತ್ಸವ' ಕಾರ್ಯಕ್ರಮಗಳನ್ನು, ವಿಶೇಷವಾಗಿ ಆಯೋಜಿಸಿದ, ಮುನ್ಸುದ್ದಿಗಳು ಬಂದಿವೆ.

<><><>

ಕೊಡಗು ಜಿಲ್ಲೆ ಕುಶಾಲನಗರದ ರಥ ಬೀದಿಯಲ್ಲಿ, ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮದ ಹಿನ್ನೆಲೆ ಐದು ಸಾವಿರ ಜನ, ಕನ್ನಡ ಗೀತೆಗಳನ್ನು ಇಂದು ಪ್ರಸ್ತುತ ಪಡಿಸಲಿದ್ದಾರೆ. ಕೊಡಗು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಮಾಹಿತಿ ನೀಡಿ, ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ, ವಿಶಿಷ್ಟವಾದ ನಾಡ ಗೀತೆ, ರೈತ ಗೀತೆಗಳನ್ನು ಹಾಡುವ ಮೂಲಕ, ಐತಿಹಾಸಿಕ ದಾಖಲೆ ಬರೆಯಲಿದ್ದಾರೆ ಎಂದರು.

<><><>

"2036ನೇ ಒಲಿಂಪಿಕ್ಸ್ ನಲ್ಲಿ, ಭಾರತ ಹೆಚ್ಚು ಪದಕಗಳನ್ನು ಗೆಲ್ಲುವ ದೇಶವನ್ನಾಗಿಸಲು, ಸೂಕ್ತ ತರಬೇತಿ ನೀಡಿ, ದೇಶವನ್ನು ಕ್ರೀಡಾ ಪ್ರಧಾನ ದೇಶವನ್ನಾಗಿಸುವ, ಪಣ ತೊಡಬೇಕು" ಎಂದು, ಮೇಜರ್ ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತರಾದ  ತೃಪ್ತಿ ಮುರುಗುಂಡೆ ಆಶಿಸಿದ್ದಾರೆ. ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ, ಕರ್ನಾಟಕ ಅಂಚೆ ಇಲಾಖೆ ಸಹಯೋಗದಲ್ಲಿ ಆಯೋಜಿತ, 38 ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಗೆ, ತೃಪ್ತಿ ಅವರು ಚಾಲನೆ ನೀಡಿ, ಮಾತನಾಡಿದರು.

<><><>

ಚಿಕ್ಕಮಗಳೂರು ಜಿಲ್ಲೆ, ಆಲ್ದೂರು ವ್ಯಾಪ್ತಿಯಲ್ಲಿ 23 ಕಾಡಾನೆಗಳಿರುವ ಗುಂಪು, ಕಳೆದ 5 ದಿನಗಳಿಂದ, ಸಂಚರಿಸುತ್ತಿದೆ. ತುಡುಕೂರು ಗ್ರಾಮದಲ್ಲಿ ವಿದ್ಯುತ್ ಸ್ಪರ್ಷದಿಂದ, ಈ ಗುಂಪಿನ ಒಂದು ಕಾಡಾನೆ ಮೃತ ಪಟ್ಟಿದೆ. ಕುದುರೆಮುಖ, ತುಡಕೂರು ಮತ್ತು ಆಲ್ದೂರು ಹೋಬಳಿ ವ್ಯಾಪ್ತಿಯ ರಸ್ತೆಯಲ್ಲಿ ಸಂಚರಿಸುವವರು, ಮುನ್ನೆಚ್ಚರಿಕೆ ವಹಿಸುವಂತೆ, ರಾತ್ರಿ ವೇಳೆ ಸಂಚಾರ ಮಾಡದಂತೆ ಅರಣ್ಯ ಇಲಾಖೆ ಕೋರಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಾರತ್ ಉತ್ಪನ್ನಗಳನ್ನು ಯೋಗ್ಯ ಹಾಗೂ ಸೋವಿ ದರದಲ್ಲಿ ಮಾರಾಟ ಮಾಡುವ ವಾಹನಗಳಿಗೆ, ಇಂದು ಬೆಳಗ್ಗೆ 10.30ಕ್ಕೆ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ಆವರಣದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಲಿದ್ದಾರೆ.

<><><>

ಚಿಕ್ಕಮಗಳೂರಿನ, ಬಾಬಾ ಬುಡನ್‌ಗಿರಿಯ ದತ್ತ ಪೀಠದಲ್ಲಿ, ದತ್ತಮಾಲೆ ಅಭಿಯಾನದ ಅಂಗವಾಗಿ, ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ದತ್ತಮಾಲಾಧಾರಿಗಳು, ಶೋಭಾ ಯಾತ್ರೆ ನಡೆಸಿ, ದರ್ಶನ ಪಡೆದರು.

<><><>

ಟಿಪ್ಪು ಸುಲ್ತಾನ್ ಜಯಂತಿ ಅಂಗವಾಗಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಟಿಪ್ಪು ಸಮಾಧಿಗೆ, ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಮುಸ್ಲಿಂ ಮುಖಂಡರು ಭೇಟಿ ನೀಡಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು.

<><><>

ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಮಿಕ ಇಲಾಖೆ, 2 ಸಾವಿರದ 269 ನಕಲಿ ಕಾರ್ಮಿಕರ ಗುರುತಿನ ಚೀಟಿಗಳನ್ನು ರದ್ದುಪಡಿಸಿದೆ ಎಂದು, ಕಾರ್ಮಿಕ ಅಧಿಕಾರಿ ಶಬಾನಾ ಆಜ್ಮಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಯುವಶಕ್ತಿಯ ಸೃಜನಶೀಲತೆಗೆ ಪೂರಕವಾದ, ಮಹತ್ವದ ಯೋಜನೆಗಳು ಕೇಂದ್ರದಿಂದ ಜಾರಿಗೆ – ಪ್ರಲ್ಹಾದ ಜೋಶಿ.
- ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ, 11 ಸಾವಿರದ 290 ವೈವಿಧ್ಯಮಯ ಭತ್ತದ ತಳಿಗಳ ಸಂರಕ್ಷಣೆ, ಶ್ಲಾಘನೀಯ – ಎನ್.ಚಲುವರಾಯಸ್ವಾಮಿ.
- ಜಾನಪದವೇ ಎಲ್ಲ ಕಲೆಗಳಿಗೆ ಉಸಿರು ಮತ್ತು ಆಸರೆ – ಪದ್ಮಶ್ರೀ ಬಿ.ಮಂಜಮ್ಮ ಜೋಗತಿ.
- ಇಂದು, ರಾಜ್ಯಾದ್ಯಂತ ವೀರ ವನಿತೆ ಒನಕೆ ಓಬವ್ವನವರ ಜಯಂತ್ಯುತ್ಸವ; ಶ್ರದ್ಧಾ ಭಕ್ತಿಯಿಂದ ಆಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>